ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ,
ಪೊನ್ನಂಪೇಟೆ.

**ಸಿ.ಸಿ. ನಂ. 176/2022 PW – 2**

ದಿನಾಂಕಃ **23.09.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿಯ ಹೆಸರು | : | ಸುರೇಶ್ |
| ತಂದೆ ಹೆಸರು | : | ಲೇಟ್ ಚಿಟ್ಟಿಯಪ್ಪ |
| ವಯಸ್ಸು | : | **40** ವರ್ಷ |
| ಉದ್ಯೋಗ | : | ವ್ಯಾಪಾರ |
| ವಾಸ ಸ್ಥಳ | : | ಹೈಸೊಡ್ಲೂರು |

ಮುಖ್ಯ ವಿಚಾರಣೆಃ ಫಿರ್ಯಾದುದಾರರ ಪರ ಶ್ರೀ ಕೆ. ಪಿ. ಬಿ. ವಕೀಲರಿಂದಃ-

ದಿ. 10.12.2020 ರಲ್ಲಿ PW -1 ರವರು ಕರೆ ಮಾಡಿ ಸಾಲದ ಅಗ್ರಿಮೆಂಟ್‌ಗೆ ಸಾಕ್ಷಿಯಾಗೆ ಸಹಿ ಮಾಡಲು ಕರೆಸಿದರು. ಅಲ್ಲಿ ಉತ್ತಪ್ಪ, ಆರೋಪಿ ಮತ್ತು PW -1 ರವರು ಇದ್ದರು. ನಾನು ಆ ಕರಾರನ್ನು ಓದಿ ಸಾಕ್ಷಿಯಾಗಿ ಸಹಿ ಹಾಕಿದೆ. ಸಾಕ್ಷಿಯು ನಿ. ಪಿ. 9 ರಲ್ಲಿ ಅವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ. ಪಿ. 9(ಇ) ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ- ಆರೋಪಿ ಪರ ಶ್ರೀ ಎಂ. ಹೆಚ್. ಎನ್. ವಕೀಲರಿಂದ ಃ -

PW -1 ರವರು ನಮ್ಮ ಊರಿನವರೇ ಅವರ ಗಂಡ ಸತ್ತು ಹೋದ ನಂತರ ಅವರ ಜಮೀನನ್ನು ನಮಗೆ ಲೀಜ್ ಮಾಡಿ ಕೊಟ್ಟಿದ್ದು ಪರಿಚಯ. ಈಗಲೂ ಲೀಜ್ ಜಮೀನು ನನ್ನ ಸ್ವಾದೀನದಲ್ಲಿದೆ. ಪೊನ್ನಂಪೇಟೆಯಲ್ಲಿ ನಿ. ಪಿ. 9 ದಾಖಲೆಗೆ ಸಹಿ ಹಾಕಿರುತ್ತೇನೆ. ಸಹಿ ಹಾಕುವಾಗ ವಕೀಲರು ಇರಲಿಲ್ಲ, Deed writer ಆ ಪತ್ರವನ್ನು ತಯಾರಿಸಿರುತ್ತಾರೆ. ನಾನು ಹೇಳಿದ ದಿನಾಂಕದಂದು ಕೊರೋನಾ ಸರ್ಕಾರದ ನಿಯಮಗಳು ಜಾರಿಯಲ್ಲಿದ್ದು ಸಾರ್ವಜನಿಕರಿಗೆ ಓಡಾಡುವ ಆದೇಶ ಇರಲಿಲ್ಲ ಮತ್ತು ಯಾವುದೇ ಅಂಗಡಿ

ಮುಗ್ಗಟ್ಟುಗಳು ತೆರೆದಿರಲಿಲ್ಲ ಎಂದರೆ ಸರಿ. ವ್ಯಾಪಾರದ ಉದ್ದೇಶದಿಂದ ಈ ಕರಾರಿನಲ್ಲಿ ಸಾಲ ಪಡೆದಿರುವ ಬಗ್ಗೆ ಇತ್ತು. ನಿಖರವಾದ ಯಾವ ವ್ಯಾಪಾರಕ್ಕೆ ಆರೋಪಿ ಹಣ ಪಡೆದರು ನನಗೆ ಗೊತ್ತಿಲ್ಲ. ಕರಾರಿನಂತೆ ರೂ. 20 ಲಕ್ಷ ಹಣ ಸಾಲ ವ್ಯವಾಹಾರವಾಗಿದ್ದು, 4 ಲಕ್ಷ ಹಣ ಮೊದಲಿಗೆ ಕೊಡಬೇಕೆಂದು ಆಗಿರುತ್ತದೆ. ನಾನು ಹೋಗುವಷ್ಟರಲ್ಲಿ ದಾಖಲೆ ತಯಾರಾಗಿತ್ತು. ಛಾಪಾ ಕಾಗದದ ಸಮೇತ ಸಹಿ ಮಾಡುವಾಗ ಕರಾರು ಇತ್ತು. ನಾನು ಹೋಗುವ ಮುಂಚೆಯೇ ಆರೋಪಿ ಮತ್ತು PW -1 ರವರ ಜೊತೆ ಮಾತುಕತೆ ಆಗಿತ್ತು, ನನಗೆ ದಾಖಲೆಯಲ್ಲಿರುವಂತೆ ಮಾತ್ರ ಗೊತ್ತಿರುತ್ತದೆ. ಈ ಪತ್ರ ಆಗುವ ದಿನ PW -1 ರವರ ಗಂಡ ಸತ್ತು ಹೋಗಿದ್ದರು, ಅಂದಾಜು 1 ವರ್ಷದ ಹಿಂದೆ ತೀರಿ ಹೋಗಿರಬಹುದು. ಆರೋಪಿ ಕಡೆಯಿಂದ ಯಾರು ಇರಲಿಲ್ಲ. ನಾನು ಆರೋಪಿಯ ಸಮಕ್ಷಮ ಈದಾಖಲೆಗೆ ಸಹಿ ಹಾಕಿರುವುದಿಲ್ಲ, ಇದು ಸೃಷ್ಟಿತ್ತ ದಾಖಲೆಯಾಗಿದ್ದು ಮತ್ತು PW -1 ರವರು ನಮ್ಮ ಊರಿನವರಾಗಿದ್ದು ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

Sd/-
ಸಿವಿಲ್ ನ್ಯಾಯಾಧೀಶರು, ಪೊನ್ನಂಪೇಟೆ.